ಜೀವನದ ಪ್ರಶ್ನೆ. ಆದುದರಿಂದ ಬೇರೆ ಕಡೆ ಹೆಚ್ಚು ಕದಿಮೆಮಾಡಿ ಈ ಕಾರ್ಖಾನೆಗೆ ಹೆಚ್ಚಿನ ವಿದ್ಯುತ್‌ನ್ನು ಸರಬರಾಜು ಮಾಡುವುದಕ್ಕೆ ಆಗುತ್ತದೆಯೇ ಎಂದು ನೇರವಾಗಿ ತಿಳಿಸಿ ;

ಶ್ರೀ ಜೆ. ಎಸ್. ದೇಶಮುಖ್.—ವಿದ್ಯುತ್ ಕದಿತವನ್ನು ಆಧರಿಸಿ ಈ ಕಾರ್ಖಾನೆಗೆ ಒಟ್ಟು ದೊರೆತ ಎನರ್ಜಿ ಎಂಟೈಟಲ್‌ಮೆಂಟ್—362.00 ದಶ ಲಕ್ಷ ಯೂನಿಟ್, ಜುಲೈ 1984ರಿಂದ ಜೂನ್ 1985ರವರೆಗೆ ಈ ಕಾರ್ಖಾನೆ ಬಳಕೆಮಾಡಿದ ವಿದ್ಯುತ್ 300 00 ದಶ ಲಕ್ಷ ಯೂನಿಟ್. ಆದರೆ ಈ ಕಾರ್ಖಾನೆಯು ಮಂಡಲಿಗೆ 30-6-1985ರವರೆವಿಗೆ 38,73,51, 919-64 ರೂಪಾಯಿ ಗಳನ್ನು ಬಾಕಿ ಕೊಡಬೇಕಾಗಿದೆ.

ವಿಷಯ.—ಕರ್ನಾಟಕದಲ್ಲಿ ಸಣ್ಣ ಜಲವಿದ್ಯುದಾಗಾರ ಸ್ಥಾಪನೆ ಬಗ್ಗೆ.

ಪ್ರ. ಸಂಖ್ಯೆ 77 (35) ಶ್ರೀ ಕೆ. ಎಚ್. ಶ್ರೀನಿವಾಸ್ (ಶಿವಮೊಗ್ಗ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ವಿದ್ಯುತ್ ಗಣಿ ಹಾಗೂ ಭೂವಿಜ್ಞಾನಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ;

ಅ) ರಾಜ್ಯದಲ್ಲಿ ಸಣ್ಣ ಜಲವಿದ್ಯುದಾಗರಗಳ ಸ್ಥಾಪನೆಗೆ ಪರಿಶೋಧಿಸಲಾದ ಹಾಗೂ ಸೂಕ್ತವೆಂದು ಕಂಡು ನೀಡೇಶನಗಳ ಸಂಖ್ಯೆ (ಯೋಜನೆಯ ಹೆಸರು, ಸ್ಥಳ ಮತ್ತು ಸಾಮರ್ಥ್ಯ ಇವುಗಳನ್ನು ಕೊಡಬಹುದು) ಎಷ್ಟು ;

ಆ) ಗುತ್ತಿಗೆ ಆಧಾರದ ಮೇರೆಗೆ ಈ ಸಣ್ಣ ಜಲವಿದ್ಯುಯೋಜನೆಯ ಕಾರ್ಯವನ್ನು ಕೈಗೊಳ್ಳಲು ಖಾಸಗಿ ವಲಯದ ಉದ್ಯಮಿಗಳಿಗೆ ಅವಕಾಶಮಾಡಿಕೊಡಲು ಸರ್ಕಾರ ನಿರ್ಧಾರ ಕೈಕೊಂಡಿದೆಯೆ ;

ಇ) ಖಾಸಗಿ ವ್ಯಕ್ತಿ ಮತ್ತು ಉದ್ದಿಮೆ ಕಂಪೆನಿಗಳಿಗೆ ನಿರ್ಮಾಣ ಮತ್ತು ಬಳಕೆಗಾಗಿ ಈಗಾಗಲೇ ಅನುಮೋದನೆ ನೀಡಲಾಗಿರುವ ಸಣ್ಣ ಜಲವಿದ್ಯುಯೋಜನೆಗಳ ಸಂಖ್ಯೆ (ವ್ಯಕ್ತಿ ಅಥವಾ ಉದ್ದಿಮೆಗಳ ಹೆಸರು, ಗುತ್ತಿಗೆ ನಿಯಮಗಳನ್ನು ಕೊಡಬೇಕು.

ಶ್ರೀ ಜಿ. ಎಸ್. ದೇಶಮುಖ್ (ವಿದ್ಯುಚ್ಛಕ್ತಿ, ಗಣಿ ಮತ್ತು ಭೂಗರ್ಭ ಮಂತ್ರಿಗಳು).—

ಅ) ರಾಜ್ಯದಲ್ಲಿ ಸಣ್ಣ ಹಾಗೂ ಅತಿ ಸಣ್ಣ ಜಲವಿದ್ಯುದಾಗಾರಗಳನ್ನು ಸ್ಥಾಪಿಸಲು ಸೂಕ್ತವೆನಿಸಿದ ಒಟ್ಟು 225 ನಿವೇಶನಗಳನ್ನು ಗುರುತಿಸಲಾಗಿದೆ. ಸೂಕ್ತವೆನಿಸಿರುವ 23 ಯೋಜನಾ ಪ್ರದೇಶಗಳ ಬಗ್ಗೆ ಕ್ಷೇತ್ರ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಇವುಗಳ ವಿವರಗಳನ್ನು ಅನುಬಂಧ 1ರಲ್ಲಿ ಲಗತ್ತಿಸ ಲಾಗಿದೆ. ಉಳಿದ ಯೋಜನಾ ಪ್ರದೇಶಗಳ ಬಗ್ಗೆ ಪರಿಶೋಧನಾ ಕಾರ್ಯಮುಂದುವರಿದಿದೆ.

ಆ) ಸರ್ಕಾರವು ತನ್ನ ಆದೇಶ ಸಂಖ್ಯೆ ಪಿಡಬ್ಲ್ಯೂಡಿ 214 ಪಿಪಸಿ 88 ಸರ್ಕಾರ ಆದೇಶದಲ್ಲಿ ಖಾಸಗಿ ವಲಯದ ಉದ್ಯಮಿಗಳು ಯಾವುದೇ ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುದಾಗಾರಗಳನ್ನು ಸ್ವಂತವಾಗಿ ಸ್ಥಾಪಿಸಲು, 25 ಮೆಗಾವಾಟ್ ವರೆಗಿನ ಸಾಮರ್ಥ್ಯವುಳ್ಳ ಜಲವಿದ್ಯುದ್ ಸ್ಥಾವರ ಅಥವಾ ಸಣ್ಣ ಜಲ ವಿದ್ಯುತ್ ಘಟಕಗಳನ್ನು ಸ್ವಂತವಾಗಿ ಸ್ಥಾಪಿಸಲೂ ಮತ್ತು 25 ರಿಂದ 100 ಮೆಗಾವಾಟ್‌ವರೆಗಿನ ಸಾಮರ್ಥ್ಯದಲ್ಲಿ ಮಧ್ಯಮ ಗಾತ್ರದ ಜಲ ವಿದ್ಯುಯೋಜನೆಗಳನ್ನು ಸಾಮರ್ಥ್ಯದ ಅರ್ಹತೆಗೆ ಅನುಸಾರ ವಾಗಿ ಸ್ಥಾಪಿಸಲೂ ಅನುಮತಿ ನೀಡಿದೆ. ಈ ಎಲ್ಲ ಕೆಲಸಗಳೂ ಸರ್ಕಾರಿ ಆದೇಶದಲ್ಲಿನ ನಿಯಮ ನಿಬಂಧನೆಗಳಿಗನುಸಾರವಾಗಿ ನಡೆಯಬೇಕಾಗಿರುತ್ತದೆ.

ಇ) ಸರ್ಕಾರ ಖಾಸಗಿ ವ್ಯಕ್ತಿ ಮತ್ತು ಕಂಪೆನಿಗಳಿಗೆ ಸಣ್ಣ ಜಲವಿದ್ಯುದ್ಯೋಜನೆಗಳನ್ನು ಸ್ಥಾಪಿಸಲು ಅನುಮೋದಿಸಿರುವುದರ ಬಗ್ಗೆ ವಿವರಗಳು.—

1) ಮಲ್ಲಾಪುರ ಜಲವಿದ್ಯುದ್ಯೋಜನೆ, ಸ್ಥಾಪಿತ ಸಾಮರ್ಥ್ಯ 9 ಮೆಗಾವಾಟ್ ಮೆಸರ್ಸ್ ಎಂ. ಎಸ್. ರಾಮಯ್ಯಗ್ರೂಪ್

2) ನಿರ್ವಾರ್, ಗಣೇಕಲ್ ಮತ್ತು ಕಲ್ಮಲ ಸಣ್ಣ ಜಲವಿದ್ಯುದ್ಯೋಜನೆಗಳು—ಸ್ಥಾಪಿತ ಸಾಮರ್ಥ್ಯ : 1.75 ಮೆಗಾವಾಟ್ ಮೆಸರ್ಸ್ ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ.

3) ಶಿವಪುರ ಜಲವಿದ್ಯುತ್ ಯೋಜನೆ ಸ್ಥಾಪಿತ ಸಾಮರ್ಥ್ಯ 18 ಮೆ.ವಾ. ಮೆಸರ್ಸ್ ಬೊರೂಕ್ಕಾ ಸ್ಪೀಲ್ ಲಿಮಿಟೆಡ್‌ಗೆ, ಮಲ್ಲಾಪುರ, ನಿರ್ವಾರ್, ಗಣೇಕಲ್ ಮತ್ತು ಕಲ್ಮಲ ಶಿವಪುರ ಜಲವಿದ್ಯುತ್ ಯೋಜನೆಗಳಿಗೆ ಅನ್ವಯಿಸುವ ಪರತ್ತು, ನಿಯಮ ಮತ್ತು ನಿಬಂಧನೆಗಳನ್ನು ಅನುಬಂಧ 11ರಲ್ಲಿ ಲಗತ್ತಿಸಲಾಗಿದೆ.

ಅನುಬಂದ—1

ಪರಿಶೋಧನೆಯಲ್ಲಿರುವ ಸಣ್ಣ ಜಲವಿದ್ಯುತ್ ಯೋಜನೆಗಳ ವಿವರಗಳು

ಕ್ರಮ ಸಂಖ್ಯೆ	ಸಣ್ಣ ಜಲವಿದ್ಯುತ್ ಯೋಜನೆ	ನಿವೇಶನ	ಸ್ಥಾಪಿತ ಸಾಮರ್ಥ್ಯ ಕೆ.ವಾ.
1	2	3	4
1.	ನಿರ್ವಾರ್, ತುಂಗಭದ್ರಾ ಎಡದಂಡೆನಾಲೆ ಮೇಲೆ	ನಿರ್ವಾರ್ ಮಾನ್ವಿ ತಾಲ್ಲೂಕು	1x1000–1000
2.	ಗಣೇಕಲ್ ತುಂಗಭದ್ರಾ ಎಡದಂಡೆನಾಲೆ ಮೇಲೆ	ಗಣೇಕಲ್ ದೇವದುರ್ಗ ರಾಯಚೂರು ಜಿಲ್ಲೆ	1x350–350
3.	ಕಲ್ಮಲ ತುಂಗಭದ್ರಾ ಎಡದಂಡೆನಾಲೆ ಮೇಲೆ	ಕಲ್ಮಲ-ರಾಯಚೂರು ತಾ. ರಾಯಚೂರು ಜಿಲ್ಲೆ	1x400–1400
4.	ಮಲ್ಲಾಪುರ ಸಣ್ಣ ಜಲವಿದ್ಯುದ್ಯೋಜನೆ ತುಂಗಾಭದ್ರಾ ಎಡದಂಡೆ ನಾಲೆ	ಮಲ್ಲಾಪುರ ಗಂಗಾವತಿ ತಾ, ರಾಯಚೂರು ಜಿಲ್ಲೆ	2x4500–9000
5.	ವಿಶ್ವೇಶ್ವರಯ್ಯನಾಲೆಯ ಮದ್ದೂರು ಶಾಖೆ	ಮಂಡ್ಯ ಜಿಲ್ಲೆ	1x1500–1500
6.	ಶಿವಸಮುದ್ರ—ಶಿವಸಮುದ್ರ ವಿದ್ಯುತ್ ಚಾನಲ್ ಮೇಲೆ	ಶಿವಸಮುದ್ರ ಮಂಡ್ಯ ಜಿಲ್ಲೆ	1x3000–3000
7.	ವಿಶ್ವೇಶ್ವರಯ್ಯನಾಲೆಯ ಹೆಡ್‌ವರ್ಕ್ಸ್	ಕೆ.ಆರ್.ಎಸ್. ಅಣೆಕಟ್ಟು ಮಂಡ್ಯ ಜಿಲ್ಲೆ	2x6000–12000
8.	ಕಿಲಾರ—ವಿಶ್ವೇಶರಯ್ಯ ನಾಲೆಯ ಮದ್ದೂರು ಶಾಖೆ ಮೇಲೆ	ಕಿಲಾರ ಹಳ್ಳಿ ಮಂಡ್ಯ ಜಿಲ್ಲೆ	1x750–750
9.	ಘೂಪದಹಾಳ್–ಘಟಪ್ರಭ ಎಡದಂಡೆ ನಾಲೆಯ ಹೆಡ್	ಧೂಪದಹಾಳ ಹಳ್ಳಿ ಬಳಿ ಗೋಕಾಕ್ ತಾಲ್ಲೂಕು ಬೆಳಗಾವಿ ಜಿಲ್ಲೆ	2x2000–4000
10.	ಘಟಪ್ರಭ ಇಳಕಲು–ಘಟಪ್ರಭಾ ಎಡದಂಡೆ ನಾಲೆ ಮೇಲೆ	ಮಥೋಳ್ ಬಿಜಾಪುರ ಜಿಲ್ಲೆ	1x1000–1000
11.	ಕೃಷ್ಣರಾಜಸಾಗರ–ಬಲದಂಡೆ ನಾಲೆಯ ಹೆಡ್‌ವರ್ಕ್ಸ್	ಕೆ.ಆರ್.ಎಸ್. ಅಣೆಕಟ್ಟು ಮೈಸೂರು ಜಿಲ್ಲೆ	2x2000–4000
12.	ವಾಣಿವಿಲಾಸ ಸಾಗರ	ಪಿರಿಯಾರು ಚಿತ್ರದುರ್ಗ ಜಿಲ್ಲೆ	2x2500x5000
13.	ಹಾರಂಗಿ	ಕುಶಾಲನಗರ ಕೊಡಗು ಜಿಲ್ಲೆ	2x3000–6000
14.	ಸಂಖ್ಯೆ—1ಎನ್.ಎಲ್.ಬಿ.ಸಿಯ ಶಹಾಪುರ ಶಾಖೆ ಮೇಲೆ	ಶಹಾಪುರ ತಾಲ್ಲೂಕು ರಾಯಚೂರು ಜಿಲ್ಲೆ	1x2000–2000
15.	ಸಂಖ್ಯೆ—2ಎನ್.ಎಲ್.ಬಿ.ಸಿಯ ಶಹಾಪುರ ಶಾಖೆ ಮೇಲೆ	ಶಹಾಪುರ ತಾಲ್ಲೂಕು ರಾಯಚೂರು ಜಿಲ್ಲೆ	1x2000–2000
16.	ಸಂಖ್ಯೆ—3ಎಸ್.ಎಲ್.ಬಿ.ಸಿಯ ಶಹಾಪುರ ಶಾಖೆ ಮೇಲೆ	ಶಹಾಪುರ ತಾಲ್ಲೂಕು ರಾಯಚೂರು ಜಿಲ್ಲೆ	1x750–750

1	2	3	4
17.	ಸಂಖ್ಯೆ—4ಎನ್.ಎಲ್.ಬಿ.ಸಿಯ ಶಹಾಪುರ ಶಾಖೆ ಮೇಲೆ	ಶಹಾಪುರ ತಾಲ್ಲೂಕು ರಾಯಚೂರು ಜಿಲ್ಲೆ	1x2000=2000
18.	ಸಂಖ್ಯೆ—5 ಎನ್.ಎಲ್.ಬಿ.ಸಿಯ ಶಹಾಪುರ ಶಾಖೆ ಮೇಲೆ	ಶಾಹಾಪುರ ತಾಲ್ಲೂಕು ರಾಯಚೂರು ಜಿಲ್ಲೆ	1x700=7700
19.	ಸಂಖ್ಯೆ—6ಎನ್.ಎಲ್ ಬಿ.ಸಿಯ ಶಹಾಪುರ ಶಾಖೆ ಮೇಲೆ	ಶಹಾಪುರ ತಾಲ್ಲೂಕು ರಾಯಚೂರು ಜಿಲ್ಲೆ	1-150-150
20.	ಸಂಖ್ಯೆ—7ಎನ್.ಎಲ್ಬ.ಸಿಯ ಶಹಾಪುರ ಶಾಖೆ ಮೇಲೆ	ಶಹಾಪುದ ತಾಲ್ಲೂಕು ರಾಯಚೂರು ಜಿಲ್ಲೆ	1x1200=1200
21.	ಸಂಖ್ಯೆ—8ಎನ್.ಎಲ್.ಬಿ.ಸಿಯ ಶಹಾಪುರ ಶಾಖೆ ಮೇಲೆ	ಶಹಾಪುರ ತಾಲ್ಲೂಕು ರಾಯಚೂರು ಜಿಲ್ಲೆ	1x400=400
22.	ಸಂಖ್ಯೆ—9ಎನ್.ಎಲ್.ಬಿ.ಸಿಯ ಶಹಾಪುರ ಶಾಖೆ ಮೇಲೆ	ಶಹಾಪುರ ತಾಲ್ಲೂಕು ರಾಯಚೂರು ಜಿಲ್ಲೆ	1x25=25
23.	ಸಂಖ್ಯೆ 10—ಎನ್.ಎಲ್.ಬಿ ಸಿಯ ಶಹಾಪುರ ಶಾಖೆ ಮೇಲೆ	ಶಹಾಪುರ ತಾಲ್ಲೂಕು ರಾಯಚೂರು ಜಿಲ್ಲೆ	1x3000=3000
		ಮೊತ್ತ	60,225

ANNEXURE—II

TERMS AND CONDITIONS FOR MINI HYDELS.

1. The ownership of the captive unit would vest with the company for a period of 25 years from the date of commissioning of the power house. The company shall not hypotehcate the sites and the structures, installations machinery, building etc., thereon for any period longer than the period for which the sites are leased to by Government.

2. The sites on which the Captive units will be located would be leased to the Company for a period of 25 years at a nominal amount of Rs, 1000/-per annum in addition to the period of construction & Commissioning. Thereafter, the sites with the structures including the electrical installations, machinery, buildings, and other appurtenant works constructed in connection with such hydel generation shall vest with Govt. and no amount will be payable by Government on any account.

3. The Company shall pay royalty to Government at K.E.B/ K.P.C.L. rates prevailing from time to time.

4. The company will have to pay electricity duty as applicable to K.E.B./K.P.C.L. from time to time.

5. The cost of Tungabhadra reservoir will be apportioned to the project based on mutual discussions and agreement. The

payment should be made by the firm in equate annual instalments approved by Govt. over the period of lease.

6. Transmission line from power house to grid point should be constructed by K.E.B. at firm's cost. The transmission line would be maintained by K.E B. and the firm should pay the O & M charges as decided by K.E B. The firm should also pay wheeling charges as decided by K.E.B The details should be worked out between K.E.B./K.P.C.L. and the industry to arrive at a practicable working arrangements.

7. The arrangements for banking of power, whenever required should be worked out on an year to year basis and agreed to between K.E B./K.B.C.L. and the industry.

8. The Construction installation of all the components should be as per the designs and specifications laid down by the K.P.C L. will have the right to ensure quality control and ensure compliance with designs and prescribed standard specifications. Administrative control of the plant will vest with a Board of Management to be constituted by Govt. which would comprise of re-presentatives of the firm, K.E.B. K.P.C.L. and Govt. of Karnataka The programme, the sequence and the schedule of construction will be prepared and submitted by the firm and executed in accordance with the final approval of K.B.G.L.

9. The release of water will be totally controlled by the Irrigation department and no claims by the Company for comensation would be entertained.

10. Power cut will be applied on contract demand minus the installed capacity of the captive unit. In other words, the generation from the captive unit is protected from power cut.

11. The firms should pay all the expenditure incurred by K.P.C.L. in these projects till the date of their takieg over and also agree to honour all the commitments made by K.P.C L. on these projects.

19. If the parties do not take effective stepes to the satisfaction of Govt. of Karnataka to implement the project within 18 months from the date of Government Order alloting the captive unit, Covt. reserves the right to terminate the allotment/agreement without notice.

13. Before entering into agreement, detailed calculations and finrncial implication should be approved by Government,

ಶ್ರೀ ಕೆ. ಹೆಜ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೆ, ಖಾಸಗಿ ವ್ಯಕ್ತಿಗಳಿಗೆ ಕಂಪನಿಗಳಿಗೆ ಅಥವಾ ಗಾರಿಕೆಗಳಿಗೆ, ಜಲವಿದ್ಯುತ್ ಯೋಜನೆಯನ್ನು ನಿರ್ಮಾಣ ಮಾಡತಕ್ಕಂಥ ಅವಕಾಶ ಕೊಡುವ ಸಂದರ್ಭದಲ್ಲಿ ಅದರ ಬಗ್ಗೆ ವ್ಯಾಪಕವಾದಂಥ ಮಾಹಿತಿ ಜಾಹಿರುಪಡಿಸಿ ಆ ಬಗ್ಗೆ ಮುಂದೆ ಬರತಕ್ಕ ವಾಣಿಜ್ಯೋದ್ಯಮಿಗಳು ಯಾರು ಯಾರು ಇದ್ದಾರೆ ಅವರು ಸರ್ಕಾರಕ್ಕೆ ತುಂಬಾ ಉಪಯುಕ್ತವಾದಂಥ ಹೆಚ್ಚು ಲಾಭದಾಯಕವಾದಂಥ ಒಪ್ಪಂದದ ಮೇಲೆ ಏನು ಬರುತ್ತಾರೆ ಅದನ್ನು ಪರಿಶೀಲನೆ ಮಾಡು

ತ್ತೀರೋ ಅಥವಾ ನೀವು ಯಾವುದೋ ಒಂದು ಫಾರಮುಲಾ ಇಟ್ಟುಕೊಂಡಿರುವ ಪ್ರಕಾರ ಯಾರಿಗೆ ಅಂದರೆ ಅವರಿಗೆ ಕೊಡುತ್ತೀರೋ ?

ಶ್ರೀ ಜೆ. ಎಸ್. ದೇಶಮುಖ್.—ಎಲ್ಲರಿಗೂ ಒಂದೇ ಒಂದು ಫಾರ್‌ಮುಲಾ ಇಟ್ಟಿದ್ದೇವೆ. ಆ ಫಾರ್‌ಮುಲಾದಲ್ಲಿ ಯಾರು ಬಂದರೂ ಕೊಡುತ್ತೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ಈ ವಿಚಾರದಲ್ಲಿ ಸುಮಾರು 5 ವರ್ಷಗಳಿಂದ ಹಿಂದೆ ಯಾವಗಿಯವರಿಗೆ ಕೊಡಬೇಕೆಂದು ನಿರ್ಣಯ ಆದಾಗ ಜಾಹಿರು ಮಾಡಿ ಕೇಳತಕ್ಕಂಥ ನಿರ್ಣಯ ಆಯಿತು. ಆ ಪ್ರಕಾರ ಈಗ ಕೇಳಿದ್ದೀವೆ. ಬಂದಂಥ ಅರ್ಜಿಗಳನ್ನು ಪರಿಶೀಲನೆ ಮಾಡಿ ಸರ್ಕಾರ ಕ್ರಮ ಕೈಗೊಂಡಿದೆ.

ಶ್ರೀ ಕೆ. ಪೆಚ್. ಶ್ರೀನಿವಾಸ್.—ನಮ್ಮ ಮಾಹಿತಿ ಪ್ರಕಾರ ಹೇಳುವುದಾದರೆ, ತಾವು ಒಂದು ಸ್ಟ್ಯಾಂಡರ್ಡ್ ಫಾರಮುಲಾ ಇಟ್ಟುಕೊಂಡಿದ್ದೀರಿ. ಅದನ್ನು ಯಾರು ಮಾಡಿದ್ದಾರೋ ಗೊತ್ತಿಲ್ಲ. ಆ ಲೆಕ್ಕದ ಪ್ರಕಾರ ಯಾರು ಬರುತ್ತಾರೋ, ನಿಮಗೆ ಯಾರಿಗೆ ಸಂತೋಷವೆಂದು ಕಾಣಿಸುತ್ತದೆಯೋ ಅವರಿಗೆ ಕೊಡುತ್ತಿದ್ದೀರಿ ಅದು ತಪ್ಪಾಗುವುದಿಲ್ಲ ಎಂದರೆ ತುಂಬಾ ಸಂತೋಷ. ಮಾನ್ಯ ಮುಖ್ಯಮಂತ್ರಿಗಳು ಈ ಸಂದರ್ಭದಲ್ಲಿ ನಮಗೆ ಸ್ಪಷ್ಟವಾದ ಭರವಸೆಯನ್ನು ಕೊಡಬೇಕು. ಈ ರೀತಿ ಜಾಹಿರು ಪಡಿಸಿದಂಥ ಸಂದರ್ಭದಲ್ಲಿ ಅದರ ಬಗ್ಗೆ ಯಾರು ಮುಂದೆ ಬರುತ್ತಾರೆ, ಅವರಿಗೆ ಈ ಸ್ಟ್ಯಾಂಡರ್ಡ್ ಫಾರಮುಲಾ ಬೇಕಾಗಿಲ್ಲ. ಸರ್ಕಾರಕ್ಕೆ ಇದಕ್ಕಿಂತಲೂ ಹೆಚ್ಚಿನ ಲಾಭ ಮಾಡಿಕೊಡತಕ್ಕ ಉದ್ಯಮಗಳು ಇದ್ದರೆ ಅದಕ್ಕೆ ವಿತಕ್ಕೆ ಅನುವು ಮಾಡಿಕೊಡಬಾರದು. ಇನ್ನೊಂದು ವಿಚಾರ ಅಂದರೆ, 25 ವರ್ಷ ಅವರಿಗೆ ಸಂಪೂರ್ಣವಾಗಿ ಅವಕಾಶ ಕೊಟ್ಟು ಅನಂತರ ಬಿಲ್ಡಿಂಗ್, ಮೆಷಿನರಿ, ಇನ್ಸ್ಟಾಲೇಷನ್ ತೆಗೆದುಕೊಳ್ಳತಕ್ಕದ್ದು ಎಂದು ಮಾಡಿದ್ದೀರಿ. ಆದರೆ ಒಂದೊಂದು ಪ್ರಾಜೆಕ್ಟ್ ಆಯಸ್ಸು ಎಷ್ಟು ? 25 ವರ್ಷಗಳಲ್ಲಿ ಬಂಡವಾಳ ವಿನಾದರೂ ಉಳಿಯುತ್ತದೆಯೇ ? ಆ ಕಡೆ ಗಮನ ಕೊಟ್ಟು ಮಾಡುತ್ತಿದ್ದೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಯಾರು ಯಾರು ಮುಂದೆ ಬರುತ್ತಾರೆ ಮತ್ತು ಯಾವುದು ಸರ್ಕಾರಕ್ಕೆ ಅನುಕೂಲ ಇದೆ, ಅಂತಹವರಿಗೆ ಕೊಡುವುದು. ಜಾಹಿರು ಪಡಿಸಿದಾಗ, ಮುಂದೆ ಯಾರಾದರು ಮುಂದೆ ಬಂದರೆ ಸಮರ್ಥರಾದವರನ್ನೇ ಆಯ್ಕೆ ಮಾಡುತ್ತೇವೆ. ಆ ಬಗ್ಗೆ ನಿಯಮಗಳನ್ನೆಲ್ಲಾ ರಚಿಸಿದ್ದೇವೆ. ಅದರಲ್ಲಿ ಯಾವರೀತಿಯಿಂದ ವಿದ್ಯುತ್ ಉತ್ಪಾದನೆಯಾಗುತ್ತದೆ, ಅವರು ಯಾವಂತೆ ಕೊಡಬೇಕು ಅವರು ಕೊಡುವಾಗ ಯಾವ ದರದಲ್ಲಿ ಕೊಡಬೇಕು, ಎಂದೆಲ್ಲಾ ನಿಯಮಗಳನ್ನೆಲ್ಲಾ ಮಾಡಿದ್ದೇವೆ. ಆ ನಿಯಮಗಳ ಪ್ರಕಾರ ಮಾಡುತ್ತಿದ್ದೇವೆ.

ಶ್ರೀ ಕೆ. ಪೆಚ್. ಶ್ರೀನಿವಾಸ್.—ಆ ನಿಯಮಗಳನ್ನು ಸಭೆಯ ಮುಂದಿಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ—ಇಡುತ್ತೇವೆ.

ವಿಷಯ.—ಒಕ್ಕಲುತನ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳಲ್ಲಿನ ಅವ್ಯವಹಾರ ಕುರಿತು

ಪ್ರ. ಸಂಖ್ಯೆ 78 (79) ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಸಹಕಾರಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಧಾರವಾಡ ಜಿಲ್ಲೆಯ ರೋಣ ತಾಲ್ಲೂಕು ಒಕ್ಕಲುತನ ಹಾಗೂ ಗ್ರಾಮೀಣ ಅಭಿವೃದ್ಧಿ ಸಹಕಾರಿ ಬ್ಯಾಂಕು ಆಪಾದನೆ ಹಾಗೂ ತಪ್ಪುತಪ್ಪರ ಪ್ರಕರಣವನ್ನು ಎದುರಿಸುತ್ತಿರುವುದು ನಿಜವೇ, ಹಾಗಿದ್ದಲ್ಲಿ ಆ ಆಪಾದನೆಗಳು ಯಾವುವು ;

ಆ) ಆಪಾದನೆಗೊಳಗಾದ ರೋಣ ತಾಲ್ಲೂಕು ಬ್ಯಾಂಕ್‌ನ ಆಡಳಿತ ಮಂಡಲಿಯ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ ಹಾಗೂ ಅದರ ವಿವರಗಳನ್ನು ಒದಗಿಸುವುದು ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ಈ ರೀತಿಯ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ, ಆದರೆ 1982ರ-83ರ ಆಡಿಟ್ ವರದಿಯಲ್ಲಿ ಬ್ಯಾಂಕ್‌ನ ವ್ಯವಹಾರಗಳಲ್ಲಿ ಕೆಲವು ನ್ಯೂನತೆಗಳನ್ನು ತೋರಿಸಲಾಗಿದೆ.

ಆ) 1892-83ನೇ ಸಾಲಿನ ಆಡಿಟ್ ವರದಿಯಲ್ಲಿ ಕಾಣಿಸಿದ ನ್ಯೂನತೆಗಳನ್ನು ಸರಿಪಡಿಸಲು ನಿರ್ದೇಶಿಸಿ ಸಹಕಾರ ಸಂಘಗಳ ಕಾಯಿದೆಯ ಸೆಕ್ಷನ್ 68 ರ ಪ್ರಕಾರ ಆಜ್ಞೆ ಮಾಡಲಾಗಿದೆ. ಈಗ 1983-84ನೇ ಸಾಲಿನ ಲೆಕ್ಕ ತಪಾಸಣೆಯನ್ನು ಕೈಗೊಳ್ಳಲಾಗಿದೆ.

ಶ್ರೀ ಜ್ಞಾನದೇವ ದೊಡ್ಡಮೇಟಿ.—ನ್ಯೂನತೆಗಳು ಯಾವ ಸ್ವರೂಪದಲ್ಲಿವೆಯೆಂದು ಹೇಳುತ್ತೀರಾ